# ಅಧ್ಯಾಯ - 11

# ಮತಶ್ರದ್ಧೆ ಮತ್ತು ತತ್ವಜ್ಞಾನ

## ಧಾರ್ಮಿಕ ಆಚರಣೆಗಳು :

ಧರ್ಮಸೂತ್ರಗಳ ಅಧ್ಯಯನದಿಂದ ಸ್ಪಷ್ಟವಾಗುವ ಅಂಶವೇನೆಂದರೆ, ಸ್ಮೃತಿಗಳಲ್ಲಿ ಉಕ್ತವಾಗಿರುವ ಆಚರಣೆಗಳಿಗೆ ಹೋಲಿಸಿಕೊಂಡರೆ ಸೂತ್ರಕಾಲದಲ್ಲಿ ಧಾರ್ಮಿಕ ಆಚರಣೆಗಳು ಅಷ್ಟಾಗಿ ಇರಲಿಲ್ಲ ಎಂದೇ ಹೇಳಬಹುದು. ಧರ್ಮಸೂತ್ರದಲ್ಲಿ ವಿಶೇಷವಾಗಿ ವೈಯುಕ್ತಿಕ ಆಚಾರಕ್ಕೆ ಹೆಚ್ಚು ಆಗ್ರಹ ತೋರಿಸಲಾಗಿದೆ. ಸ್ಮೃತಿಗಳಲ್ಲಿ ವರ್ಣಿತವಾದ ನಾನಾ ವಿಧವಾದ ವ್ರತಗಳು ಪೂಜೆಗಳು ಇವುಗಳ ಅಭಾವವು ಸೂತ್ರಗಳಲ್ಲಿ ಎದ್ದು ಕಾಣುವುದು. ಧರ್ಮಸೂತ್ರಗಳಲ್ಲಿ ಉಕ್ತವಾದ ಪ್ರಮುಖ ವ್ರತಾಚರಣೆ ಎಂದರೆ ಪ್ರಾಯಶ್ಚಿತ್ತಗಳು. ವೇದೋಕ್ತವಾದ ಹೋಮಗಳೂ ಆಚರಣೆಯಲ್ಲಿತ್ತು. ಧ್ಯಾನ ಮತ್ತು ಚಿಂತನೆಗಳಿಗೆ ಹೆಚ್ಚಿನ ಮಹತ್ವವನ್ನು ನೀಡಲಾಗಿತ್ತು. ಆತ್ಮಸಾಕ್ಷಾತ್ಕಾರಕ್ಕೆ ಮತ್ತು ಮೋಕ್ಷ ಸಾಧನೆಗೆ ಧ್ಯಾನವೇ ಅತ್ಯುತ್ತಮವಾದ ಸಾಧನವಾಗಿತ್ತು.[1] ಧರ್ಮಸೂತ್ರಗಳ ಕಾಲದಲ್ಲಿ ಬಹು ದೇವತಾರಾಧನೆ ರೂಢಿಯಲ್ಲಿದ್ದಂತೆ ತೋರಬರುವುದು. ಇಲ್ಲಿ ಬರುವ ದೇವತೆಗಳೆಲ್ಲಾ ಹೆಚ್ಚಾಗಿ ವೇದಕಾಲಕ್ಕೆ ಸಂಬಂಧಿಸಿದವರು. ಅನೇಕ ಧರ್ಮಸೂತ್ರಗಳು ಕೇವಲ ಧಾರ್ಮಿಕ ಆಚರಣೆಯೇ ಮೋಕ್ಷಸಾಧಕ ಎಂಬ ವಿಚಾರವನ್ನು ಒಪ್ಪಿಕೊಂಡಂತೆ ಇಲ್ಲ. ಆಪಸ್ತಂಬರೇ ತಿಳಿಸುವಂತೆ ಆತ್ಮಲಾಭವೇ ಶ್ರೇಷ್ಠವಾದುದು. ಕರ್ಮ ಮತ್ತು ಜ್ಞಾನಗಳ ಸಮುಚ್ಚಯವೇ ಮೋಕ್ಷಕ್ಕೆ ಸಾಧನ ಎಂಬ ಅಭಿಪ್ರಾಯವನ್ನು ಸೂಚಿಸುವುದು.[2] ಈ ವಿಚಾರವು ಈಶಾವಾಸ್ಯೋಪನಿಷತ್ತಿನ ವಿಚಾರಧಾರೆಯು

ಪ್ರತಿಧ್ವನಿಯಂತೆ ಕಂಡುಬರುವುದು. ಈ ಉಪನಿಷತ್ತಿನಲ್ಲಿ ವಿದ್ಯೆ ಮತ್ತು ಅವಿದ್ಯೆಗಳ ಸಂಬಂಧದಿಂದ ಮೋಕ್ಷ ಪ್ರಾಪ್ತವಾಗುವುದೆಂದು ಹೇಳಿದೆ.[3]

ಧಾರ್ಮಿಕ ಆಚರಣೆಯನ್ನು ಶ್ರದ್ಧೆಯಿಂದ ಮಾಡಬೇಕು ಎಂದು ಆಪಸ್ತಂಬರು ಹೇಳುವರು.[4] ಕೇವಲ ಸಾಂಸಾರಿಕ ಉದ್ದೇಶದಿಂದಲೇ ಧರ್ಮಾಚರಣೆಯನ್ನು ಮಾಡಬಾರದು. ಖ್ಯಾತಿ ಲಾಭ ಮೊದಲಾದ ಲೌಕಿಕ ಫಲವನ್ನು ಉದ್ದೇಶವಾಗಿಟ್ಟುಕೊಂಡು ಧರ್ಮಾಚರಣೆ ಮಾಡುವುದನ್ನು ಆಪಸ್ತಂಬರು ಬಹಿರಂಗವಾಗಿಯೇ ಖಂಡಿಸುವರು.

ಲೌಕಿಕ ಪ್ರಯೋಜನದ ದೃಷ್ಟಿಯಿಂದ ಮಾಡಿದ ಧರ್ಮಕಾರ್ಯವು ಫಲಕಾಲದಲ್ಲಿ ನಿಷ್ಫಲವಾಗುವುದು. ಲೌಕಿಕ ಫಲವು ಧರ್ಮಾಚರಣೆಯ ಗೌಣಫಲ. ಆಪಸ್ತಂಬರ ಪ್ರಕಾರ ಶ್ರದ್ಧೆಯಿಂದ ಧರ್ಮಾಚರಣೆಯನ್ನು ಮಾಡಿದರೆ ಅದು ತಾನೇತಾನಾಗಿ ಫಲವನ್ನೂ, ಕೀರ್ತಿಯನ್ನೂ ಉಂಟುಮಾಡುವುದು. ಹೇಗೆಂದರೆ ಹಣ್ಣಿನ ಪ್ರಯೋಜನಕ್ಕೋಸ್ಕರ ಹಾಕಿದ ಮಾವಿನ ಮರವು ನೆರಳು ಮತ್ತು ಸುಗಂಧವನ್ನು ನೀಡುವಂತೆ ಧರ್ಮದ ಆಚರಣೆಯಿಂದ ಲೌಕಿಕ ಫಲವು ಗೌಣರೂಪದಲ್ಲಿ ಪ್ರಾಪ್ತವಾಗುವುದು.[5] ಸ್ಮೃತಿ ಮತ್ತು ಪುರಾಣಕಾಲದ ವೈಶಿಷ್ಟ್ಯಪೂರ್ಣವಾದ ಧಾರ್ಮಿಕ ಆಚರಣೆಗಳ ಸಡಗರ ಹಾಗೂ ವೈಭವಗಳ ಅಭಾವವು ಆಪಸ್ತಂಬರ ಕಾಲದಲ್ಲಿ ಇದ್ದಂತೆ ತೋರುವುದಿಲ್ಲ.

ಧಾರ್ಮಿಕ ಆಚರಣೆಗಳಲ್ಲಿ ಮುಖ್ಯವಾಗಿ ಬರುವಂತಹುದು ಎಂದರೆ ನಿತ್ಯಕರ್ಮಗಳು. ಅವುಗಳಲ್ಲಿ ಸಂಧ್ಯಾ, ಪಂಚಮಹಾಯಜ್ಞ, ಉದಕತರ್ಪಣ, ಶ್ರಾದ್ಧ, ಇವು ಪ್ರಮುಖವಾದವು. ಈ ಪಂಚಮಹಾಯಜ್ಞಗಳ ಕಲ್ಪನೆಯಲ್ಲಿಯೂ ಧರ್ಮಸೂತ್ರಕಾರರಿಗೆ ಏಕಾಭಿಪ್ರಾಯ ಇದ್ದಂತೆ ತೋರುವುದಿಲ್ಲ. ಉದಾ: ಬೋಧಾಯನರು ಮನುಷ್ಯಯಜ್ಞ ಎಂದರೆ

ಪ್ರತಿ ನಿತ್ಯವೂ ಅನ್ನವನ್ನು ನೀಡಬೇಕೆಂದು ಹೇಳುವರು. ಆದರೆ ಆಪಸ್ತಂಬರು ವ್ಯಕ್ತಿಯು ತನ್ನ ಶಕ್ತ್ಯನುಸಾರವಾಗಿ ದಾನವನ್ನು ಕೊಡಬೇಕೆನ್ನುವರು.[6] ಆಪಸ್ತಂಬರ ಕಲ್ಪನೆಯು ಈ ವಿಷಯದಲ್ಲಿ ಹೆಚ್ಚು ವಿಶಾಲವಾಗಿರುವಂತೆ ತೋರುವುದು.

**ಕರ್ಮ ಸಿದ್ಧಾಂತ:**

ಕರ್ಮಸಿದ್ಧಾಂತವು ಸೂತ್ರಗಳಲ್ಲಿ ಪ್ರಮುಖವಾದ ಪಾತ್ರವನ್ನು ವಹಿಸಿದೆ. ಧರ್ಮಸೂತ್ರಗಳಲ್ಲಿ ಹೇಳಿರುವ ನೈತಿಕ ವಿಚಾರಗಳ ಅವಿಭಾಜ್ಯ ಅಂಗ - ಕರ್ಮಸಿದ್ಧಾಂತ. ನಾವು ಆಚರಿಸುವ ಯಜ್ಞಯಾಗಾದಿಗಳು ಹಾಗೂ ಧಾರ್ಮಿಕ ಆಚರಣೆಗಳು ಅಭೀಷ್ಟ ಫಲವನ್ನು ನೀಡುತ್ತಿದ್ದುದರ ಜೊತೆ ನಮ್ಮ ಆಚರಣೆಯಲ್ಲಿನ ದೋಷವು ವಿರುದ್ಧ ಫಲವನ್ನೂ ನೀಡುತ್ತಿತ್ತು ಎಂಬ ಬಲವಾದ ನಂಬಿಕೆ ಸೂತ್ರಕಾರರಿಗೆ ಇತ್ತು.

ಸ್ವರ್ಗ ಮತ್ತು ನರಕಗಳ ಬಗ್ಗೆ ಸೂತ್ರಕಾರರಿಗೆ ಪೂರ್ಣವಾದ ನಂಬಿಕೆ ಇತ್ತು.[7] ಮನುಷ್ಯನು ತನ್ನ ಕರ್ಮಾನುಸಾರವಾಗಿಯೇ ಜನ್ಮವನ್ನು ಪಡೆಯುವನು ಎಂದು ಸೂತ್ರಕಾರರು ಹೇಳುವರು. ಈ ವಿಚಾರವಾಗಿ ಆಪಸ್ತಂಬರು ಹೆಚ್ಚು ಸ್ಪಷ್ಟವಾಗಿ ತಿಳಿಸುವರು. ಎಲ್ಲ ವರ್ಣದವರೂ ತಮ್ಮ ವರ್ಣಾಶ್ರಮ ಧರ್ಮವನ್ನು ಪಾಲಿಸುವುದರ ಮೂಲಕ ಸ್ವರ್ಗಸುಖವನ್ನು ಪಡೆಯುವರು.[8] ಹೀಗೆ ಕರ್ಮಫಲವನ್ನು ಅನುಭವಿಸಿ ಉಳಿದ ಪುಣ್ಯ ವಿಶೇಷದಿಂದ ಈ ಲೋಕದಲ್ಲಿ ಪುನಃ ಉತ್ತಮ ಜನ್ಮದ ಜೊತೆ ರೂಪ, ವರ್ಣ, ಶಕ್ತಿ, ಪ್ರತಿಭೆ, ಜ್ಞಾನ, ಧನ, ಧರ್ಮಾನುಷ್ಠಾನದ ಕ್ಷಮತೆ ಇವುಗಳೆಲ್ಲವನ್ನೂ ಪಡೆಯುವನು. ಇದು ಚಕ್ರದಂತೆ ಎರಡು ಲೋಕದಲ್ಲಿಯೂ ಸುಖಪೂರ್ವಕ ಚಲಿಸುತ್ತಿರುವುದು. ಉತ್ತಮ ಕೃಷಿ ಕ್ಷೇತ್ರದಲ್ಲಿ ಹಾಕಿದ ಬೀಜವು ನಾನಾ ವಿಧದ ಫಲವನ್ನು ನೀಡುವಂತೆ, ಉತ್ತಮ ಆಚರಣೆಯಿಂದ ಉತ್ತಮ ಫಲವೂ, ದುರಾಚರಣೆಯಿಂದ ಕೆಟ್ಟ ಫಲವೂ ಪ್ರಾಪ್ತವಾಗುವುದು.

ಅಧರ್ಮದ ಆಚರಣೆಯಿಂದ ಶ್ರೇಷ್ಠವರ್ಣದ ವ್ಯಕ್ತಿಯು ಮುಂದಿನ ಜನ್ಮದಲ್ಲಿ ಹೀನ ಜನ್ಮವನ್ನು, ಹಾಗೂ ಸ್ವಧರ್ಮವನ್ನು ಸತತವಾಗಿ ಪಾಲನೆ ಮಾಡುವುದರ ಮೂಲಕ ಉತ್ತಮ ವರ್ಣವನ್ನು ಪಡೆಯುವನು. ಹೀಗೆ ವರ್ಣಾಶ್ರಮ ಧರ್ಮಾನುಷ್ಠಾನದಿಂದ ಜನ್ಮಾಂತರದಲ್ಲಿ ವರ್ಣಾಂತರ ಪ್ರಾಪ್ತವಾಗುವುದೆಂದು ಆಪಸ್ತಂಬರು ಅಭಿಪ್ರಾಯ ಪಡುವರು.[9] ಆದ್ದರಿಂದ ಸದಾ ವರ್ಣಾಶ್ರಮ ಧರ್ಮವನ್ನು ಪರಿಪಾಲಿಸಬೇಕೆಂಬುದೇ ಇದರ ಆಶಯ. ಹೀಗೆ ಆಪಸ್ತಂಬ ಧರ್ಮಸೂತ್ರದಲ್ಲಿ ಪುನರ್ಜನ್ಮ ಸಿದ್ಧಾಂತವು ಕರ್ಮ ಸಿದ್ಧಾಂತದೊಡನೆ ಬೆರೆತಿರುವುದನ್ನು ಗುರುತಿಸಬಹುದು.

ವ್ಯಕ್ತಿಯು ಅಪರಾಧವನ್ನು ಮಾಡಿದರೆ ಶಿಕ್ಷೆಯ ರೂಪದಲ್ಲಿ ಮುಂದಿನ ಜನ್ಮದಲ್ಲಿ ಹೀನವರ್ಣದಲ್ಲಿ ಜನಿಸುವನೆಂದು ಆಪಸ್ತಂಬರು ಹೇಳುವರು. ಉದಾ: ಸುವರ್ಣವನ್ನು ಕದ್ದ ಬ್ರಾಹ್ಮಣ, ಕ್ಷತ್ರಿಯ, ವೈಶ್ಯರು ಅವರು ಮಾಡಿದ ಪಾಪಕರ್ಮದ ಫಲವನ್ನು ಅನುಭವಿಸಲೋಸುಗ ಮುಂದಿನ ಜನ್ಮದಲ್ಲಿ ಕ್ರಮವಾಗಿ ಚಾಂಡಾಲ, ಪೌಲ್ಕಸ, ಮತ್ತು ವೈಣವಾಗಿ ಜನಿಸುವರು. ಇದೇ ರೀತಿಯಾಗಿ ಅನ್ಯಾನ್ಯ ಪಾಪಗಳನ್ನು ಮಾಡಿದವರೂ ಅವರ ದೋಷಕ್ಕೆ ಅನುಗುಣವಾಗಿ ವರ್ಣಚ್ಯುತರಾಗಿ ದುಷ್ಟಯೋನಿಯಲ್ಲಿ ಜನಿಸುವರು.[10]

ಕರ್ಮಸಿದ್ಧಾಂತಕ್ಕೆ ಪುನರ್ಜನ್ಮ ಸಿದ್ಧಾಂತವು ಆಧಾರಕಿತ್ತಿಯಂತಿದೆ. ಕೆಲವು ಸಂದರ್ಭಗಳಲ್ಲಿ ಲೋಕದಲ್ಲಿ ಅಸಾಂಗತ್ಯವು ತೋರಿ ಬರುವುದು. ದೃಷ್ಟಾಂತಕ್ಕೆ, ಸ್ವಧರ್ಮಾನುಷ್ಠಾನವನ್ನು ನಿಯಮಿತವಾಗಿ ಮಾಡುತ್ತಿರುವವನು ಸದಾ ದುಃಖ, ಕಷ್ಟಗಳನ್ನು ಅನುಭವಿಸುತ್ತಿರುವುದನ್ನು, ವರ್ಣಾಶ್ರಮ ಧರ್ಮಚ್ಯುತನಾದವನು ಸುಖ ಸಂತೋಷಗಳನ್ನು ಅನುಭವಿಸುತ್ತಿರುವುದನ್ನು ಕಾಣುತ್ತಿದ್ದೇವೆ. ವಿರೋಧಾಭಾಸದಿಂದ ಕೂಡಿರುವ ಇಂತಹ

ಸಂದರ್ಭಗಳಲ್ಲಿ ಕರ್ಮಸಿದ್ಧಾಂತ ಮತ್ತು ಪುನರ್ಜನ್ಮ ಸಿದ್ಧಾಂತಗಳನ್ನು ಒಪ್ಪಿಕೊಳ್ಳುವುದು ಅವಶ್ಯಕ.

ಧರ್ಮಸೂತ್ರಕಾರರಿಗೆ ನರಕದ ಕಲ್ಪನೆ ಮತ್ತು ಅದರಲ್ಲಿ ನಂಬಿಕೆ ಇದ್ದಂತೆ ತೋರುವುದು. ಆಪಸ್ತಂಬರು धर्मातिक्रमे खलु पुनर्नरकः।[11], ಯಾರು ಧರ್ಮವನ್ನು ಮೀರುವರೋ ಅವರು ನರಕಕ್ಕೆ ಹೋಗುವರು ಎಂದು ಹೇಳುವರು.[12] ಆದರೆ ಪುರಾಣಗಳಲ್ಲಿ ವರ್ಣಿಸಲ್ಪಟ್ಟಂತೆ ವಿವಿಧ ನರಕಗಳ ವರ್ಣನೆ ಧರ್ಮಸೂತ್ರಗಳಲ್ಲಿ ಕಂಡುಬರುವುದಿಲ್ಲ.

★

## ತತ್ವಜ್ಞಾನ:

ಭಾರತೀಯ ವಿಚಾರಧಾರೆಯು ಆಧ್ಯಾತ್ಮವಿದ್ಯೆಗೆ ಪ್ರಸಿದ್ಧವಾಗಿದೆ. ಆಪಸ್ತಂಬ ಧರ್ಮಸೂತ್ರದಲ್ಲಿ ಆಧ್ಯಾತ್ಮ ವಿಚಾರ ಪ್ರತಿಪಾದಿತವಾಗಿರುವ ರೀತಿಯನ್ನು ಈಗ ಅವಲೋಕಿಸೋಣ. ಮತಶ್ರದ್ಧೆಯ ವಿಚಾರಗಳು ಮತ್ತು ಆಧ್ಯಾತ್ಮ ವಿಚಾರಗಳು ಹೆಚ್ಚಾಗಿ ವೇದಗಳಲ್ಲಿ ಮತ್ತು ಉಪನಿಷತ್ತುಗಳಲ್ಲಿ ಮೂಡಿಬಂದಿದೆ. ವೇದೋತ್ತರ ಕಾಲದಲ್ಲಿ ರಚಿತವಾದ ಕಲ್ಪಸೂತ್ರಗಳಲ್ಲಿಯೂ ಆ ಕಾಲದ ಜನರ ಧಾರ್ಮಿಕ ಭಾವನೆಗಳು ಮೂಡಿಬಂದಿವೆ. ಶ್ರೌತ ಮತ್ತು ಗೃಹ್ಯ ಸೂತ್ರಗಳಲ್ಲಿ ಉಕ್ತವಾದ ಆಚಾರವಿಚಾರಗಳು ಸೂತ್ರಕಾಲದ ಜನರ ಧಾರ್ಮಿಕ ನಂಬಿಕೆ ಮತ್ತು ಶ್ರದ್ಧೆಗಳಿಗೆ ಹಿಡಿದ ಕನ್ನಡಿಯಂತಿದೆ. ಗೃಹ್ಯ ಮತ್ತು ಧರ್ಮಸೂತ್ರಗಳಲ್ಲಿ ವೇದಾಂತ ವಿಚಾರಗಳಿಗಿಂತ ಹೆಚ್ಚಾಗಿ ಅಂದಿನ ಕಾಲದ ಜನರ ಧಾರ್ಮಿಕ ವಿಚಾರಗಳೇ ಚಿತ್ರಿತವಾಗಿವೆ. ಆದರೆ ಆಪಸ್ತಂಬ ಧರ್ಮಸೂತ್ರವು ಇದಕ್ಕೊಂದು ಅಪವಾದ. ಆಪಸ್ತಂಬ ಧರ್ಮಸೂತ್ರದಲ್ಲಿ ಎರಡು ಪಟಲಗಳು ಆಧ್ಯಾತ್ಮ ವಿಚಾರಗಳಿಗೆ ಮೀಸಲಾಗಿರುವುದು ಇದರ ಒಂದು ವಿಶೇಷ ಮತ್ತು ಇವು ಆಧ್ಯಾತ್ಮ ಪಟಲಗಳೆಂದೇ ಪ್ರಸಿದ್ಧವಾಗಿವೆ.

ಶಂಕರಾಚಾರ್ಯರಿಂದ ರಚಿತವಾಗಿರುವುದೆಂದು ಹೇಳಲಾಗುವ 'ವಿವರಣೆಯು' ಈ ಎರಡು ಪಟಲಗಳಿಗೆ ಇರುವುದು ಇದರ ಪ್ರಾಮುಖ್ಯವನ್ನು ಹೆಚ್ಚಿಸಿದೆ.

ವೇದಾಂತದ ವಿಚಾರವನ್ನು ತಿಳಿಸುವಾಗ ಆಪಸ್ತಂಬರು ಕೆಲವು ಶ್ಲೋಕಗಳನ್ನು ಉದಾಹರಿಸುವರು. ಪ್ರಾಯಶಃ ಈ ಶ್ಲೋಕಗಳೆಲ್ಲವೂ ಉಪನಿಷತ್ತಿನ ಶ್ಲೋಕಗಳಂತೆ ಕಂಡುಬರುವುದಾದರೂ, ಇದುವರೆಗೆ ಪ್ರಕಟಗೊಂಡ ಯಾವ ಉಪನಿಷತ್ತಿನಲ್ಲಿಯೂ ಈ ಶ್ಲೋಕಗಳು ಕಂಡುಬರುವುದಿಲ್ಲ. ಈ ಶ್ಲೋಕಗಳ ಮೂಲಕ ಆತ್ಮತತ್ತ್ವವನ್ನು ಕುರಿತು ವಿವರಿಸುವಾಗ ಆಪಸ್ತಂಬರು ಉಪನಿಷತ್ತುಗಳ ವಿಚಾರಧಾರೆಗಳಿಂದ ಪ್ರಭಾವಿತರಾದಂತೆ ತೋರುವರು.

ಆಪಸ್ತಂಬರು ಆತ್ಮಲಾಭವೇ ಪರಮಶ್ರೇಷ್ಠವಾದುದೆಂದು ಹೇಳುವರು. आत्मलाभात् परं न विद्यते ।[13] ಆತ್ಮಲಾಭಕ್ಕಿಂತ ಶ್ರೇಷ್ಠವಾದುದು ಬೇರೊಂದಿಲ್ಲ. 'ಎಲ್ಲ ಜೀವಿಗಳಲ್ಲಿಯೂ ನಿತ್ಯವೂ ಇರುವಂತಹುದೇ ಆತ್ಮ. ಈ ಆತ್ಮವು ಅನಶ್ವರ ಅಂದರೆ ಶಾಶ್ವತವಾದುದು. ಎಲ್ಲ ಪ್ರಾಣಿಗಳ ಶರೀರವೂ ಆತ್ಮದ ವಾಸಸ್ಥಳ. ಇದು ಜ್ಞಾನಸ್ವರೂಪವೂ ಪಾಪರಹಿತವೂ ಜರಾ-ರೋಗ ಇತ್ಯಾದಿ ದೋಷರಹಿತವೂ ಆಗಿ ಅಮರವಾಗಿದೆ. ಯಾರು ಈ ಚಂಚಲ ಪ್ರಾಣದಿಂದ ಕೂಡಿರುವ ಶರೀರದಲ್ಲಿರುವ ಅಚಲವಾದ ಆತ್ಮಸ್ವರೂಪವನ್ನು ಅರಿಯುವರೋ ಅವರು ಅಮರತ್ವವನ್ನು ಪಡೆಯುವರು.'

"ಆತ್ಮವು ಎಲ್ಲ ಜೀವಿಗಳಲ್ಲಿಯೂ ನಿತ್ಯವೂ ಶಾಶ್ವತರೂಪದಲ್ಲಿರುವುದು. ಇದು ಅಮರವೂ ವಿಕಾರರಹಿತವೂ ಆದುದು. ಜ್ಞಾನಸ್ವರೂಪವೂ ಅಂಗಹೀನವೂ ಆಗಿ ಶಬ್ದಸ್ಪರ್ಶಾದಿ ಗುಣಗಳಿಂದ ಅತೀತವಾಗಿದೆ. ಇದು ಪರಮ ಶುದ್ಧವೂ ಆಗಿ ಸಂಪೂರ್ಣ ವಿಶ್ವವೇ ಅದಾಗಿ

ಗಮ್ಯಸ್ಥಾನವಾಗಿದೆ. ಸತ್ರಯಜ್ಞದಲ್ಲಿ 'ವಿಷುವತ್' ಎಂಬ ದಿನವು ಮಧ್ಯದಲ್ಲಿ ಇರುವಂತೆ ಆತ್ಮನೂ ಶರೀರದ ಮಧ್ಯಭಾಗದಲ್ಲಿದೆ. ನಗರಕ್ಕೆ ಹೋಗಲು ಅನೇಕ ಮಾರ್ಗಗಳಿರುವಂತೆ ಆತ್ಮನೂ ಕೂಡ ಎಲ್ಲಿಂದಲೂ ಹೊಂದಲು ಸುಲಭಸಾಧ್ಯವಾಗಿದೆ."

"ಆತ್ಮವು ಸರ್ವಜ್ಞ, ಕಮಲದ ನಾಳಕ್ಕಿಂತಲೂ ಸೂಕ್ಷ್ಮವಾದುದು. ಆದರೂ ಸಂಪೂರ್ಣ ವಿಶ್ವವನ್ನೆಲ್ಲಾ ವ್ಯಾಪಿಸಿದೆ. ಭೂಮಿಗಿಂತಲೂ ದೊಡ್ಡದು ನಿತ್ಯನೂ ಆಗಿ ವಿಶ್ವಕ್ಕೆಲ್ಲಾ ಆಧಾರಭೂತವಾಗಿದೆ. ಇಂದ್ರಿಯಜನ್ಯವಾದ ಪ್ರಪಂಚದ ಜ್ಞಾನದಿಂದ ಭಿನ್ನವಾಗಿದ್ದರೂ ಜಗತ್ತು ಅದರಿಂದ ಭಿನ್ನವಾಗಿಲ್ಲ. ಆತ್ಮವು ಜ್ಞಾನಾತ್ಮಕವಾಗಿದ್ದು ಪರಮಸ್ಥಾನದಲ್ಲಿದೆ. ಆದ್ದರಿಂದಲೇ ಜಗತ್ತು ನಾನಾವಿಧವಾಗಿ ರೂಪಗೊಂಡಿದೆ. ಆ ಪರಮಾತ್ಮನಿಂದಲೇ ಈ ಶರೀರವೂ ಉತ್ಪನ್ನವಾಗಿದೆ. ಆದ್ದರಿಂದಲೇ ಅದು ಸೃಷ್ಟಿಯ ಮೂಲ ಕಾರಣವೂ, ನಿತ್ಯವೂ, ವಿಕಾರರಹಿತವೂ, ಅವಿನಾಶಿಯೂ ಆಗಿದೆ."[14]

ಆಪಸ್ತಂಬರು ಮೇಲೆ ತಿಳಿಸಿರುವಂತೆ ಆತ್ಮದ ವರ್ಣನೆಯನ್ನು ಮಾಡಿರುವರು. ಈ ವರ್ಣನೆಯು ಯಾವುದೇ ಉಪನಿಷತ್ತಿನಲ್ಲಿರುವ ಆತ್ಮದ ವರ್ಣನೆಗಿಂತ ಭಿನ್ನವಾಗಿಲ್ಲ. ಆಪಸ್ತಂಬರು ಆತ್ಮವಿಚಾರಗಳಿಗೆ 'ಅಧ್ಯಾತ್ಮಿಕ ಯೋಗ' ಎಂದೇ ಕರೆದಿರುವರು.[15] ಇಲ್ಲಿ ಯೋಗದ ಬಗ್ಗೆ ವಿಶೇಷ ಗಮನ ಸೆಳೆಯಲಾಗಿದೆ. ಯೋಗಸೂತ್ರದಲ್ಲಿ ಚಿತ್ತವೃತ್ತಿಗಳ ನಿರೋಧವೇ ಯೋಗ ಎಂಬುದಾಗಿ ಹೇಳಿದೆ.[16] ಇಂದ್ರಿಯಗಳನ್ನು ಬಾಹ್ಯ ವಿಷಯಾಸಕ್ತತೆಯಿಂದ ವಿಮುಕ್ತಗೊಳಿಸಿ ಮನಸ್ಸಿನ ಚಾಂಚಲ್ಯವನ್ನು ನಿಲ್ಲಿಸುವುದೇ ಯೋಗ. ಹೀಗೆ ಚಿತ್ತಶುದ್ಧನಾಗಿ ಆತ್ಮವಿಚಾರವನ್ನು ಕುರಿತು ಧ್ಯಾನ ಮಾಡಬೇಕೆಂದು ಆಪಸ್ತಂಬರು ಆಗ್ರಹಪಡಿಸುವರು. ಈ ಸಂಸಾರದಲ್ಲಿ ಯಾರು ಇಂದ್ರಿಯ ಜನ್ಯವಾದ ವಿಷಯಾಸಕ್ತತೆಯನ್ನು ತ್ಯಾಗಮಾಡಿ ಅಂತರ್ಯಾಮಿಯಾದ

ಆ ಪರಮಾತ್ಮನನ್ನು ಕುರಿತು ಸದಾ ಚಿಂತಿಸುತ್ತಾ ಆತ್ಮಸಾಕ್ಷಾತ್ಕಾರ ಪಡೆದುಕೊಳ್ಳಲು ಪ್ರಯತ್ನಶೀಲರಾಗುವರೋ ಅವರೇ ವಿದ್ವಾಂಸರು. ಸತ್ಯ, ಅನೃತ, ಸುಖ, ದುಃಖ, ಸ್ವಾಧ್ಯಾಯ, ಐಹಿಕ ಮತ್ತು ಪಾರಲೌಕಿಕಗಳೆಲ್ಲವನ್ನೂ ತ್ಯಾಗಮಾಡಿ ಪರಮಾತ್ಮನನ್ನು ಕುರಿತು ಸದಾ ಚಿಂತನೆ ಮಾಡಿದರೆ ಆತ್ಮಸಾಕ್ಷಾತ್ಕಾರವಾಗಿ ಮೋಕ್ಷಪ್ರಾಪ್ತಿಯಾಗುವುದೆಂದು ಆಪಸ್ತಂಬರು ಅಭಿಪ್ರಾಯಪಡುವರು.[17] ಆತ್ಮಸಾಕ್ಷಾತ್ಕಾರವನ್ನು ಪಡೆದವರು ಪರಮಲೋಕದಲ್ಲಿ ಸಮಸ್ತ ಸುಖ ದುಃಖಗಳಿಂದಲೂ ಮುಕ್ತರಾಗಿ ನಿರಂತರ ಸುಖದ ಅನುಭವವನ್ನು ಪಡೆಯುವರು. ಆತ್ಮಜ್ಞಾನಿಗಳು ಎಲ್ಲರಲ್ಲಿಯೂ ಆತ್ಮಸ್ವರೂಪವನ್ನು ಕಂಡುಕೊಳ್ಳುವರು ಮತ್ತು ಮೋಹದಿಂದ ಮುಕ್ತರಾಗುವರು.[18]

ಪುರುಷಾರ್ಥಗಳಲ್ಲಿ ಕೊನೆಯದಾದ ಮೋಕ್ಷವು ಮಾನವ ಜೀವಿತದ ಪರಮ ಮೌಲ್ಯ, ಪರಮಾರ್ಥ ಮತ್ತು ಪರಮಾದರ್ಶವೂ ಆಗಿದೆ. ಇದನ್ನೇ ನಿರಪೇಕ್ಷ ಸ್ವಾತಂತ್ರ್ಯದ ಮನಃಸ್ಥಿತಿ ಅಥವಾ ಮನೋಧರ್ಮ ಎಂದು ಕರೆಯಬಹುದು. ವ್ಯಕ್ತಿಯು ಮುಕ್ತನಾದಾಗ ಭೇದಭಾವರಹಿತನಾಗುವನು. ಮುಕ್ತಿಯ ಅಂತಃಸ್ವರೂಪವೇನೆಂದರೆ ಪ್ರಪಂಚ ಪ್ರಜ್ಞೆಯಿಂದ ನಿಷ್ಪ್ರಪಂಚ ಪ್ರಜ್ಞೆಗೇರುವುದೂ, ಮರ್ತ್ಯ ಪ್ರಜ್ಞೆಯಿಂದ ಅಮೃತತ್ವ ಪ್ರಜ್ಞೆಗೇರುವುದೂ, ವ್ಯಷ್ಟಿ ಪ್ರಜ್ಞೆಯಿಂದ ಸಮಷ್ಟಿ ಪ್ರಜ್ಞೆಗೇರುವುದೂ ಆಗಿದೆ.

ಆಪಸ್ತಂಬರು ಹೇಳುವಂತೆ ಆತ್ಮಜ್ಞಾನಿಯಾದವನು ರಾಗದ್ವೇಷ ವಿವರ್ಜಿತನಾಗಿ ಸರ್ವಭೂತಗಳಲ್ಲಿ ತನ್ನನ್ನೂ ತನ್ನಲ್ಲಿ ಸಮಸ್ತ ಚರಾಚರಗಳನ್ನೂ ಸಮದೃಷ್ಟಿಯಿಂದ ನೋಡುವನು. ಈ ವಿವರಣೆಯನ್ನು ನೋಡಿದರೆ ಆಪಸ್ತಂಬರ ಮೋಕ್ಷದ ಕಲ್ಪನೆ ಸ್ಪಷ್ಟವಾಗುವುದು. ಇದೇ ನಿಜವಾದ ಜೀವನ್ಮುಕ್ತ ಪ್ರಜ್ಞೆ. ಹೀಗೆ ಸರ್ವೋದಯದಲ್ಲಿ ಆತ್ಮೋದಯವನ್ನು ಕಾಣುವವನೇ ನಿಜವಾದ ಆತ್ಮಜ್ಞಾನಿ.

ಆಚಾರವೇ ಎಲ್ಲರೀತಿಯ ಸಿದ್ಧಿಗಳಿಗೂ ಮೂಲ. ಮಾನಸಿಕ ವಿಕಾರಗಳಿಗೆ ತೆರೆ ಬೀಳದೆ ಯಾವ ಪ್ರಯೋಜನವೂ ಸಿದ್ಧಿಸುವುದಿಲ್ಲವಾಗೂ ಚಂಚಲ ಮನಸ್ಸಿನಿಂದ ಮಾಡಿದ ಯಾವ ವೇದಾಂತ ಚಿಂತನೆಗಳೂ ಫಲಕಾರಿಯಾಗುವುದಿಲ್ಲ. ಆಪಸ್ತಂಬರು ತಿಳಿಸುವಂತೆ ಕ್ರೋಧ, ಹರ್ಷ, ರೋಷ ಮೊದಲಾದ ಭೂತದಾಹೀಯ ದೋಷಗಳು ಚಿತ್ತವೃತ್ತಿಗೆ ಕಾರಣ.[19] ಈ ದೋಷಗಳ ನಿರ್ಮೂಲನವು ಯೋಗದಿಂದ ಮಾತ್ರ ಸಾಧ್ಯ. ಯೋಗದ ಮೂಲಕ ಭೂತದಾಹೀಯ ದೋಷಗಳನ್ನು ನಾಶಪಡಿಸಿ, ಅವುಗಳಿಗೆ ವಿಪರೀತವಾದ ಕ್ರೋಧಹೀನತೆ, ಹರ್ಷದ ಅಭಾವ, ಅಲೋಭ ಮೊದಲಾದ ಉತ್ತಮ ಗುಣಗಳನ್ನು ಸಂಪಾದಿಸಿಕೊಂಡರೆ ವಿಶ್ವಾತ್ಮನಾಗುವನು. ಇದೇ ಧರ್ಮಸೂತ್ರದ ಸಂದೇಶ.

ಈ ಸಂದೇಶವು ಸಂತ್ರಸ್ತ ಹಾಗೂ ದಿಗ್ಭ್ರಾಂತವಾದ ಆಧುನಿಕ ಕಾಲದ ಮನುಷ್ಯನಿಗೆ ಇಂದಿಗೂ ಅನುಕರಣೀಯವಾಗಿದೆ. ಇದು ಸನ್ಮಾರ್ಗದಲ್ಲಿ ಹೋಗಲು ಪ್ರೇರಣೆಯನ್ನು ನೀಡುವುದಲ್ಲದೆ ಈ ನೈತಿಕ ಮೌಲ್ಯಗಳ ಜ್ಞಾನದಲ್ಲಿಯೇ ಇಂದೂ ಭಾರತೀಯ ಸಂಸ್ಕೃತಿಯ ಅಸ್ತಿತ್ವವೂ ಇದೆಯೆಂಬ ಆಶಾವಾದವನ್ನು ವ್ಯಕ್ತಪಡಿಸುವುದು.

★ ★ ★